# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 228 /2023

**ಸಾಕ್ಷಿಯನ್ನು ದಿಃ 10.09.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ.M.R.H ವಕೀಲರಿಂದಃ**

ಹಣಕಾಸಿನ ವ್ಯವಹಾರ ದಾಖಲೆ ಪಡೆದುಕೊಳ್ಳದೇ ಮಾಡುತ್ತೀರಾ ಎಂದರೆ ವಿಶ್ವಾಸದ ಮೇಲೆ ಮಾಡಿದ್ದೇನೆ. ವಿಶ್ವಾಸದ ಮೇಲೆ ದಾಖಲೆ ಪಡೆದುಕೊಳ್ಳದೇ ಹಣಕಾಸಿನ ವ್ಯವಹಾರ ಒಟ್ಟು ಎಷ್ಟು ಜನರ ಜೊತೆ ಮಾಡಿದ್ದಿರಾ ಎಂದರೆ ಆರೋಪಿಯೊಬ್ಬರ ಜೊತೆ ಮಾತ್ರ ಮಾಡಿದ್ದೇನೆ. ನಾನು ಹಾಜರುಪಡಿಸಿದ ನಿಪಿ–1ರ ಚೆಕ್ ದಿಃ 02.03.2023ನೇ ತಾರೀಖಿನದ್ದು. ಆರೋಪಿ ಕೊಟ್ಟಿದ್ದಾರೆ ಎಂದು ನಾನು ಹೇಳುವ ನಿಪಿ–1ರ ಚೆಕ್ಕನ್ನು ಜನವರಿಯಲ್ಲಿ ಕೊಟ್ಟರು. ಜನವರಿ ಯಾವ ವರ್ಷ, ಯಾವ ತಿಂಗಳು ಎಂದು ವಕೀಲರಿಗೆ ಹೇಳಿದ್ದಿರಾ ಎಂದರೆ ಹೇಳಿದ್ದೇನೆ. ಜನವರಿ 2023 ರಿಂದ ನಿಪಿ–1 ರ ಚೆಕ್ಕಿನಲ್ಲಿ ಕಾಣಿಸಿದ 02.03.2023ರ ಅವಧಿಯಲ್ಲಿ ನನ್ನ ಮತ್ತು ಆರೋಪಿಯ ಮಧ್ಯೆ ಯಾವುದೇ ವ್ಯವಹಾರ ನಡೆದಿಲ್ಲ. ನಿಪಿ–1ರ ಚೆಕ್ ಸಾಲಕ್ಕೆ ಸಂಬಂಧಿಸಿದ್ದಾಗಿದೆ. ನಿಪಿ–1ರ ಚೆಕ್ ಸಾಲಕ್ಕೆ ಸಂಬಂಧಿಸಿದ್ದು ಎಂದು ತೋರಿಸಲು ದಾಖಲೆ ಇಲ್ಲ, ದೂರು ದಾಖಲಿಸಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ಬಡ್ಡಿ ಮಾತುಕತೆ ಆಗಿದೆ ಎಂಬ ಬಗ್ಗೆ ನಾನು ವಕೀಲರಿಗೆ ಹೇಳಿಲ್ಲ. ನಿಪಿ–1 ರಲ್ಲಿ ಕಾಣಿಸಿದ ಮೊತ್ತಕ್ಕೆ ಬಡ್ಡಿ ಇಲ್ಲ. ಬಡ್ಡಿ ಇಲ್ಲದ ಮೇಲೆ ಸಾಲ ಎಂದು ಹೇಗೆ ಹೇಳುತ್ತಿರಾ ಎಂದರೆ ವಿಶ್ವಾಸದ ಮೇಲೆ ಹಣ ಕೊಟ್ಟಿದ್ದೇನೆ. ವಿಶ್ವಾಸದಿಂದ ಹಣ ಕೊಟ್ಟರೇ ಸಾಲ ಅಲ್ಲ ಎಂದರೆ ಸಾಲವೇ ಆಗಿದೆ. ಸಾಲ ಎಂದು ಹೇಳಬೇಕಾದರೆ ಅದಕ್ಕೆ ಬಡ್ಡಿ ವಿಧಿಸಬೇಕು ಎಂದರೆ ನಾನು ಬಡ್ಡಿಗಾಗಿ ಹಣ ಕೊಟ್ಟಿಲ್ಲ. ನನ್ನ ಮತ್ತು ಆರೋಪಿಯ ಮಧ್ಯೆ ನಿಪಿ–1ರ ಚೆಕ್ಕಿಗೆ ಸಂಬಂಧಿಸಿದಂತೆ ಯಾವುದೇ ಸಾಲದ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ನಿಪಿ–1ರ ಚೆಕ್ಕನ್ನು ಆರೋಪಿ ನನಗೆ ಕೊಟ್ಟಿದ್ದಾರೆ ಎಂದು ನೋಡಿದವರು ಇದ್ದಾರೆಯೇ ಎಂದರೆ ಆರೋಪಿಯ ಒಬ್ಬ ಸ್ನೇಹಿತ ಬಂದಿದ್ದ. ಯಾರೆಂದು ಗೊತ್ತಿಲ್ಲ. ನಿಪಿ–1ರ ಚೆಕ್ಕನ್ನು ಕೊಟ್ಟಿದ್ದಾರೆ ಎನ್ನುವ ಸಮಯದಲ್ಲಿ ಆರೋಪಿಯ ಸ್ನೇಹಿತ ಇದ್ದರು ಎಂದು ನೋಟಿಸ್ ಕೊಡುವಾಗ, ದೂರು ದಾಖಲಿಸುವಾಗ ಮತ್ತು ಸಾಕ್ಷಿ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸುವಾಗ ವಕೀಲರಿಗೆ ಮಾಹಿತಿ ನೀಡಿದ್ದೇನೆ. ನಾನು ಯಾವುದೇ ವ್ಯವಹಾರ ಮಾಡದೇ ಮನೆಯಲ್ಲಿ ಇದ್ದೇನೆ ಎಂದರೆ ಸರಿಯಲ್ಲ. ನನಗೆ ಜಮೀನು ಇಲ್ಲ ಎಂದರೆ ಸರಿ.

ನೋಟೀಸ್ ನೀಡುವಾಗ ದೂರು ದಾಖಲಿಸುವಾಗ ಮತ್ತು ಸಾಕ್ಷಿ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸುವಾಗ ನಾನು ಏನು ವ್ಯವಹಾರ ಮಾಡುತ್ತೇನೆ ಎಂದು ವಕೀಲರಿಗೆ ಮಾಹಿತಿ ನೀಡಿದ್ದೇನೆ.

ನಾನು ಯಾವುದೇ ವ್ಯವಹಾರ ಮತ್ತು ಉದ್ಯೋಗ ಮಾಡದೇ ಇರುವ ಕಾರಣ ನೋಟಿಸ್ ಮತ್ತು ದೂರಿನಲ್ಲಿ ಆ ಬಗ್ಗೆ ನಮೂದಿಸಿಲ್ಲ ಎಂದರೆ ದೂರಿನಲ್ಲಿ ನಮೂದಿಸಿಲ್ಲ. ಆರೋಪಿಯ ತಂದೆಯ ಹೆಸರು ಮರೆತಿದ್ದೇನೆ. ಆರೋಪಿ ಯಾರೆಂದು ಗೊತ್ತಿಲ್ಲದೇ ಇರುವ ಕಾರಣ ಅವರ ತಂದೆಯ ಹೆಸರು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿ ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಗೊತ್ತಿದೆ. ಆರೋಪಿ ಏನು ವ್ಯವಹಾರ ಮಾಡುತ್ತಾರೆ ಎಂದು ನಾನು ವಕೀಲರಿಗೆ ಹೇಳಿದ್ದೇನೆ. ಆರೋಪಿಗೆ ಈಗ ಸುಮಾರು 52-53 ವರ್ಷ ವಯಸ್ಸಾಗಿರಬಹುದು. ನೋಟೀಸ್ ಕೊಡುವಾಗ ಮತ್ತು ದೂರು ದಾಖಲಿಸುವಾಗ ಆರೋಪಿಯ ವಯಸ್ಸನ್ನು ವಕೀಲರಿಗೆ ಹೇಳಿಲ್ಲ. ನಾನು ಬ್ಯಾಂಕ್ ಖಾತೆ ಹೊಂದಿದ್ದೇನೆ. ನಾನು ಹುಣಸೂರಿನ SBI ನಲ್ಲಿ ಮತ್ತು ಹುಣಸೂರಿನ IOB ಬ್ಯಾಂಕ್ ನಲ್ಲಿ ಖಾತೆ ಹೊಂದಿದ್ದೇನೆ. ಎರಡೂ ಕೂಡ ಉಳಿತಾಯ ಖಾತೆಯಾಗಿದೆ. ನಾನು ಆದಾಯ ತೆರಿಗೆ ಪಾವತಿಸುವುದಿಲ್ಲ. ನಾನು ದಿಃ 01.04.2022 ರಿಂದ ಅಕ್ಟೋಬರ್ 2022ರ ಕೊನೆಯವರೆಗೆ ಬ್ಯಾಂಕ್ ವ್ಯವಹಾರ ಅಷ್ಟೊಂದು ಮಾಡಿಲ್ಲ. ದಿಃ 01.04.2022 ರಿಂದ 31.10.2022ರಲ್ಲಿ ನನ್ನ ಬ್ಯಾಂಕ್ ನಲ್ಲಿ 5 ರಿಂದ 10 ಸಾವಿರದಷ್ಟು ವ್ಯವಹಾರ ಆಗಿರಬಹುದು.

ನನ್ನ ಮತ್ತು ಆರೋಪಿಯ ಮಧ್ಯೆ ಸಾಲದ ವ್ಯವಹಾರ ಆಗಿದೆ ಎನ್ನುವ ರೂ. 4 ಲಕ್ಷ ನನ್ನ ಬ್ಯಾಂಕ್ ಖಾತೆಯಲ್ಲಿ ಇರಲಿಲ್ಲ. ರೂ.4 ಲಕ್ಷ ನನಗೆ ಎಲ್ಲಿಂದ, ಹೇಗೆ ಬಂತು ಎಂಬ ಬಗ್ಗೆ ದಾಖಲೆ ಇಲ್ಲ. ನಾನು ತುಂಬಾ ಸರಳ ಜೀವನ ನಡೆಸುತ್ತಿದ್ದೇನೆ ಎಂದರೆ ಸರಿಯಲ್ಲ. ಮಧ್ಯಮ ಜೀವನ ನಡೆಸುತ್ತಿದ್ದೇನೆ. ನನ್ನನ್ನು ಸೇರಿಸಿಕೊಂಡು ನನ್ನ ಜೀವನ ಶೈಲಿಯಲ್ಲಿ 4 ಜನ ಇದ್ದೇವೆ. ನನಗೆ ತಿಂಗಳಿಗೆ ರೂ.20 ಸಾವಿರ ಜೀವನ ನಡೆಸಲು ಸಾಕಾಗುತ್ತದೆ. ನನ್ನ ಮಕ್ಕಳು ಐಟಿ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ. ಅವರು ನನಗೆ ಆರ್ಥಿಕವಾಗಿ ಸಹಾಯ ಮಾಡುತ್ತಾರೆ. ಮಕ್ಕಳು ಸಹಾಯ ಮಾಡುವುದರಿಂದ ಜೀವನ ಶೈಲಿ ನಡೆಯುತ್ತದೆ.

(**ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು**.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.